ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಜೀವನಗಾಥೆ

**ರಿಜರ್ವ್ ಬ್ಯಾಂಕಿನ ಗವರ್ನರ್ ಹುದ್ದೆಗೆ ಒಪ್ಪಿಗೆಯೇ ಎಂದು ವಿತ್ತ ಮಂತ್ರಿ ಕೇಳುತ್ತಾರೆ. ಈಗ ಆ ಕೆಲಸವನ್ನು ಒಪ್ಪಿಕೊಳ್ಳದೇ ಕಾದರೆ ಆರು ತಿಂಗಳುಗಳಲ್ಲಿ ಕ್ಯಾಬಿನೆಟ್ ಸಚಿವರ ಸ್ಥಾನಕ್ಕೆ ಪರಿಗಣಿಸುವ ಸಾಧ್ಯತೆಯಿದೆ. ತಕ್ಷಣಕ್ಕೆ ಬಂದ ಘನತೆಯನ್ನು ಒಪ್ಪುವುದೋ, ಅಥವಾ ಮುಂದೆ ಬರಬಹುದಾದ ಇನ್ನೂ ಉನ್ನತ ಘನತೆಗಾಗಿ ಕಾದು ಒಂದು ಚಾನ್ಸ್ ತೆಗೆದುಕೊಳ್ಳುವುದೋ...**

ಹಿರಿಯರೊಬ್ಬರು ಹಿಂದೆ ಈ ಮಾತು ಹೇಳಿದ್ದರು – 'ನಾನು ಮಾತೃಭಾಷೆಯಲ್ಲಿ ಆತ್ಮಕಥೆಯನ್ನೂ, ಇಂಗ್ಲೀಷಿನಲ್ಲಿ ಜೀವನಸ್ಮೃತಿಯನ್ನೂ ಬರೆಯುತ್ತಿದ್ದೇನೆ.' ಎರಡರ ನಡುವಿನ ವ್ಯತ್ಯಾಸ ಏನೆಂದು ತಿಳಿಯದೇ ಕೇಳಿದಾಗ ಅವರು ಹೇಳಿದ್ದು: 'ಆತ್ಮಕಥೆಯಲ್ಲಿ ನನ್ನ ಜೀವನದ ವಿವರಗಳಿರುತ್ತವೆ. ಜನರಿರುತ್ತಾರೆ, ಗಾಳಿಮಾತು ಮಸಾಲೆಯಿರುತ್ತದೆ. ಸ್ಮೃತಿಯಲ್ಲಿ ನನ್ನ ವೃತ್ತಿಗೆ ಸಂಬಂಧಿಸಿದ ವಿವರಗಳಿರುತ್ತವೆ. ಗಂಭೀರವಾಗಿರುತ್ತದೆ.' ದುವ್ವೂರಿ ಸುಬ್ಬಾರಾವು ಬರೆದ 'ಜಸ್ಟ್ ಎ ಮರ್ಸಿನರಿ' ಪುಸ್ತಕವನ್ನು ಕೈಹಿಡಿದಾಗ ಇದು ಲೋಕಸೇವೆಯಲ್ಲಿ ಜೀವನ ಕಳೆದ ವ್ಯಕ್ತಿಯೊಬ್ಬರ ಜೀವನ ಸ್ಮೃತಿಯಾಗಿರಬಹುದೆಂದು ನಾನು ಎಣಿಸಿದ್ದೆ. ಆದರೆ ಇಲ್ಲಿ ಸಿಕ್ಕದ್ದೇ ಬೇರೆ. ಇಲ್ಲಿ ಸಿಕ್ಕದ್ದು ಟಿಪ್ಪಣಿಗಳು. ಟಿಪ್ಪಣಿಗಳು ಆತ್ಮಕಥೆ ಮತ್ತು ಸ್ಮೃತಿಗಿಂತ ಭಿನ್ನವಾಗಿವೆ.

ಆತ್ಮಕಥೆ, ಸ್ಮೃತಿಗಳಲ್ಲಿ ಅನೇಕ ಪಾತ್ರಗಳಿರುತ್ತವೆ. ಬರಹಗಾರ ಮೂಲ ಪಾತ್ರವಾದರೂ, ಆ ಪಾತ್ರದ ಸುತ್ತಮುತ್ತ ಮಹತ್ವದ ಪಾತ್ರವಹಿಸಿರುವ ಭಿನ್ನ ಪಾತ್ರಗಳು ಮತ್ತು ಅವರೊಂದಿಗಿನ ವ್ಯವಹಾರ ಬಂದು ಹೋಗುತ್ತದೆ. ಆದರೆ ಟಿಪ್ಪಣಿಗಳಲ್ಲಿರುವುದು ಒಂದು ಕೇಂದ್ರ ಪಾತ್ರ, ಮತ್ತು ಆ ಪಾತ್ರದ ಮೌಲ್ಯಮಾಪನ. ಇಲ್ಲಿ ವಿವರಗಳಿವೆಯಾದರೂ ಆತ್ಮ ಮಂಥನ– ನಿರ್ಮಮಕಾರದ ಆತ್ಮಮಂಥನ– ಮುಖ್ಯವಾಗುತ್ತದೆ. ಹೀಗಾಗಿ ಪಾತ್ರಗಳು ಗೌಣವಾಗಿ, ಸಮಸ್ಯೆಗಳು ಅದನ್ನು ನೀಗಿಸುವತ್ತ ಸಾಗಿದಾಗ ಕಾಣುವ ದ್ವಂದ್ವಗಳು ಎದುರಾಗುತ್ತವೆ. ಇದು ಮುಖ್ಯಪಾತ್ರದ ದ್ವಂದ್ವವಾದಂತೆ, ಓದುಗರ ದ್ವಂದ್ವವೂ, ಬಿಕ್ಕಟ್ಟೂ ಆಗುವುದು ಆಸಕ್ತಿಯ ವಿಷಯವಾಗಿದೆ. ಮುಖ್ಯಪಾತ್ರ ರೈಲಿನಲ್ಲಿ ಕೂತಿದೆ. ಮಿಕ್ಕ ಪಾತ್ರ ಮತ್ತು ಘಟನೆಗಳು ಆ ಪ್ರಯಾಣದಲ್ಲಿ ಕಿಟಕಿಯಲ್ಲಿ ಕಾಣುವ ದೃಶ್ಯಗಳಂತೆ ಸಾಗುತ್ತಿವೆ. ಓದುಗರು ಆ ಪಾತ್ರದ ಪಕ್ಕ ಕೂತ ಸಹಯಾತ್ರಿಗಳಾಗಿ ಅವೇ ದ್ವಂದ್ವ ಮತ್ತು ಖುಷಿ–ಆತಂಕಗಳನ್ನು ಎದುರಿಸುತ್ತಿದ್ದಾರೆ.

ಐಎಎಸ್ ಪಾಸಾಗಿ ಲೋಕಸೇವೆಯಲ್ಲಿ ಸರ್ಕಾರಿ ಅಧಿಕಾರಿಯಾಗಿ